# ಸಕಲಭಯ ತಲ್ಲಣವ...

ಡಿ.ಕೆ. ಈರೇಗೌಡ

ಶ್ರೀರಾಮಕೃಷ್ಣರು ಹಾಡುತ್ತಿದ್ದ ಒಂದು ಪ್ರಸಿದ್ಧ ಗೀತೆಯನ್ನು ತೆಗೆದುಕೊಂಡು ಒಬ್ಬ ಸಾಧಕನ ದೃಷ್ಟಿಯಿಂದ ವ್ಯಾಖ್ಯಾನ ಮಾಡಿರುವ ಶ್ರೀ ಈರೇಗೌಡ ಅವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿವೃತ್ತ ಉಪನಿರ್ದೇಶಕರು.

ಸಕಲಭಯ ತಲ್ಲಣವ ಪರಿಹರಿಪ ಮಹಿಮನನು
ಒಮ್ಮೆಯಾದರು ಏಕೆ ಕರೆಯದಿರುವೆ
ಭವಘೋರ ಭ್ರಮೆಯಲ್ಲಿ ನಿನ್ನ ನೀನೇ ಮರೆತೆ
ಏನೀ ವಿಡಂಬನೆಯು ನಿನಗೆ ತರವೇ ||

ಜನಧನವ ಸಂಗದಲಿ ಅವನ ಮರೆಯದ ತೆರದಿ
ಎಚ್ಚರಿರು ಭ್ರಮೆಯನ್ನು ಅತ್ತದೂಡು
ನಿಜವನಾರಾಧಿಸಲು ಸರ್ವಪಾಪವಿಮುಕ್ತ
ನನ್ನ ಮಾತಿನ ನಿಜವನಳೆದು ನೋಡು ||

ಭವಜಲಧಿಯನು ದಾಟಿ ನಡೆವ ಮನವಿರೆ ನಿನಗೆ
ಅಳಿಯಾಸೆಗಳ ತೊರೆದು ಹರಿಯ ನುತಿಸು
ದೇಹ ಮನಪ್ರಾಣಗಳ ಅವನಿಗರ್ಪಿತ ಮಾಡಿ
ಪ್ರೇಮದಾರಾಧನೆಗೆ ಮನವ ಸಲಿಸು ||

( ಶ್ರೀರಾಮಕೃಷ್ಣ ವಚನವೇದ ದಿಂದ)

ಆಧ್ಯಾತ್ಮಿಕ ಅನುಭಾವಗಳ ಸುಮಧುರ "ಮದಿರೆ" ಯಿಂದ ತುಂಬಿ ತುಳುಕುತ್ತಾ ಭಗವದ್ ಅವತಾರಿಯಾದ ಶ್ರೀರಾಮಕೃಷ್ಣರು ದಕ್ಷಿಣೇಶ್ವರವನ್ನು ತಮ್ಮ ತಪೋಭೂಮಿಯ ಕೇಂದ್ರಬಿಂದುವಾಗಿ ಮಾಡಿಕೊಂಡು ಇಡೀ ಮನುಕುಲವನ್ನೇ ಮುಕ್ತರಾಗಿಸಲು ಹವಣಿಸುತ್ತಿದ್ದುದು ಸರಿಯಷ್ಟೆ. ಬರಿದಾದ ಬದುಕಿನಿಂದ ಬವಣೆಪಟ್ಟ ಅನೇಕ ಜೀವಜಂತುಗಳು ಈ ಸುಮಧುರ "ಮದಿರೆ"ಯನ್ನು ಪಾನಮಾಡಲು ಶ್ರೀಗುರುದೇವನಲ್ಲಿಗೆ ಧಾವಿಸಿ ಬರುತ್ತಿದ್ದುದೂ ಸರಿಯಷ್ಟೆ. ಅಲ್ಲಿಗೆ ಸಾಧು, ಸಂತರು, ಸಂನ್ಯಾಸಿಗಳು, ಮಹಂತರು, ಸಾಧಕರು ಪರಮಾರ್ಥ ಬದುಕಿನಲ್ಲಿ ಆಸಕ್ತಿಯುಳ್ಳವರು ಮಾತ್ರವಲ್ಲ; ದೀನರೂ ದರಿದ್ರರೂ ಭಗವಂತನಲ್ಲಿ ನಂಬಿಕೆಯಿಲ್ಲದವರೂ ಸಾಂಸಾರಿಕ ಜೀವನದಲ್ಲಿ ಬೆಂದು ಬೆಂಡಾದವರೂ ಧಾವಿಸುತ್ತಿದ್ದರು. ಅವರಾರನ್ನೂ ಕಡೆಗಣಿಸದೆ, ಅವರಿರುವ ಹಂತದಿಂದಲೇ "ಹಂತಗಳನ್ನು" ಏರುವ ಬಗೆಯನ್ನು ಸರಳಸುಂದರ ಮಾತುಗಳಲ್ಲಿ ಶ್ರೀರಾಮಕೃಷ್ಣರು ಮಾರ್ಗದರ್ಶನ ಮಾಡುತ್ತಿದ್ದರು—ಅಲ್ಲೇ ಮುಕ್ತರನ್ನಾಗಿ ಮಾಡುತ್ತಿದ್ದರು. (ಭಗವಂತನನ್ನೇ ದರ್ಶನ ಮಾಡಿದ ಮೇಲೆ ಮುಕ್ತರಾಗದೆ ಮತ್ತಿನ್ನೇನು?) ಶ್ರೀಗುರುದೇವರು ಹಾಗೆ ಮಾತುಕತೆ ನಡೆಸುವಾಗ "ಭಗವದ್ ನಾಮ" ಕಿವಿಗೆ ಬಿದ್ದೊಡನೆಯೇ ಅಡಿಗಡಿಗೆ ಸಮಾಧಿ ಸ್ಥಿತಿಗೇರುತ್ತಿದ್ದುದನ್ನೂ ಪ್ರೇಮೋನ್ಮಾದದಿಂದ ಹಾಡಿ ಕುಣಿಯುತ್ತಿದ್ದುದನ್ನೂ ಸಂದರ್ಭಕ್ಕೆ ತಕ್ಕಂತೆ ಆಶುಕವಿತೆಗಳನ್ನೂ ಕಟ್ಟಿ ಸುಮಧುರ ಕಂಠಶ್ರೀಯಿಂದ ಸಮ್ಮೋಹನಗೊಳಿಸುತ್ತಿದ್ದುದನ್ನೂ ನಾವು ಕೇಳಿ ಬಲ್ಲೆವು. (ನೋಡುವ ಭಾಗ್ಯ ನಮ್ಮ ಪಾಲಿಗೆಲ್ಲಿ?) ಅಂತಹ ಸಂದರ್ಭದಲ್ಲಿಯೇ ಮೇಲಿನ ಗೀತೆಯೂ ಹೊರಹೊಮ್ಮಿದೆ. ಇದರ ಅರ್ಥವೇನು, ಏನನ್ನು ಧ್ವನಿಸುತ್ತದೆ, ಏನನ್ನು ಅನುರಣಗೊಳಿಸುತ್ತದೆ ಎಂಬುದನ್ನು ಸ್ವಲ್ಪ ಪರಿಶೀಲಿಸೋಣ.

ವಿಚಾರ ಮಾಡಿದರೆ ಈ ಜಗತ್ತಿನಲ್ಲಿ ಪ್ರತಿ ಜೀವಜಂತುವೂ "ಭಯದ ಆವರಣ"ದಲ್ಲಿಯೇ ಬದುಕುತ್ತಿರುವುದು ಗೋಚರವಾಗುತ್ತದೆ. ಒಂದು ಕ್ರಿಮಿಯನ್ನು ನೋಡಿ, ಒಂದು ಪ್ರಾಣಿಯನ್ನು ನೋಡಿ, ಪ್ರತಿಕ್ಷಣದಲ್ಲಿಯೂ ಭಯದಿಂದ ಕಂಗಾಲಾಗಿರುವುದನ್ನು ಕಾಣಬಹುದು. ಕಾಡಿನಲ್ಲಿರುವ ಪ್ರಾಣಿಯಿರಬಹುದು, ನಾಡಿನಲ್ಲಿರುವ ಜೀವಿಯಿರಬಹುದು, "ಭಯ"ದಿಂದಲೇ ತತ್ತರಿಸುತ್ತವೆ. ಜಿಂಕೆಗೆ ಹುಲಿಯ ಭಯ — ಹುಲಿಗೆ ಮತ್ತೊಂದರ ಭಯ. ಮನೆಯಲ್ಲಿರುವ ಇರುವೆಯನ್ನೇ ತೆಗೆದುಕೊಳ್ಳಿ—ನಿಮ್ಮನ್ನು ನೋಡಿದ ತಕ್ಷಣ ಹೇಗೆ ತತ್ತರಿಸುತ್ತದೆ. ಪ್ರಾಣಿಗಳಷ್ಟೇ ಅಲ್ಲ. ಮಾನವನನ್ನೇ ಗಮನಿಸಿ. ಅದೆಷ್ಟು ಭಯಪಡುತ್ತಾನೆ! ನಾನು ಗಟ್ಟಿಗ ಎನ್ನುವ ಜಗಜಟ್ಟಿಯೂ ಮರಣವೆಂಬ ಭಯದಿಂದ ತತ್ತರಿಸುತ್ತಾನೆ. ಒಂದು ದೇಶವನ್ನು ಕಂಡರೆ ಮತ್ತೊಂದಕ್ಕೆ ಭಯ. ಜಗತ್ತನ್ನೇ "ಭಯ" ಬೆನ್ನೇರಿದೆ. ಒಟ್ಟಿನಲ್ಲಿ ಇಡೀ ನಮ್ಮ ಬದುಕನ್ನೇ "ಭಯ" ವೆಂಬ ಕಾರ್ಮೋಡ ಕವಿದಿದೆ. ಈ ಭಯದ ಸ್ವರೂಪವಾದರೂ ಅತಿ ಕ್ರೂರವಾದದ್ದು. ಸ್ವಾಮಿ ವಿವೇಕಾನಂದರು Fear is the greatest sin— "ಭಯವೆಂಬುದು ಮಹಾಪಾಪ!" ಎನ್ನುತ್ತಾರೆ. ಹಾಗಾದರೆ ಈ ಭಯದಿಂದ ಮುಕ್ತರಾಗದೆ ನಮಗೆ ಮುಕ್ತಿಯಿಲ್ಲ. ಮುಕ್ತರಾಗುವುದು ಹೇಗೆ? ಮೇಲೆ ಉಲ್ಲೇಖಿಸಿರುವ ಹಾಡು ಹೀಗೆ ನುಡಿಯುತ್ತದೆ:

ಸಕಲಭಯ ತಲ್ಲಣವ ಪರಿಹರಿಪ ಮಹಿಮನನು
ಒಮ್ಮೆಯಾದರು ಏಕೆ ಕರೆಯದಿರುವೆ?

ಒಂದಲ್ಲ, ಎಲ್ಲಾ ರೀತಿಯ ಭಯದಿಂದ ತತ್ತರಿಸುತ್ತಿರುವ ನಮಗೆ ಅದನ್ನು ಗೆಲ್ಲುವ ದಾರಿಯಿದೆ. ಅದೆಂದರೆ "ಭಯ" ವನ್ನು ಪರಿಹರಿಪ ಭಗವಂತನನ್ನು "ಒಮ್ಮೆಯಾದರು" ಕರೆ ಎಂದು ಸಾರುತ್ತದೆ ಈ ವಾಣಿ. ಹಾಗಾದರೆ ನಾವು ಎಷ್ಟು ಸಲ ಭಗವಂತನನ್ನು ಕರೆದಿಲ್ಲ. ನಾವು ಏನೆಲ್ಲಾ ಮಾಡಿಲ್ಲ? ಎಷ್ಟು ಪೂಜೆ, ಯಾತ್ರೆ, ಜಪ, ತಪ... ಇತ್ಯಾದಿ. ಹಾಗಿದ್ದರೂ ನಮಗೇಕೆ ಭಯ ಇನ್ನೂ ಹೋಗಿಲ್ಲ? ನಾವು ಮಾಡಿದ್ದೇವೆ, ಬೇಡಿದ್ದೇವೆ, ನೋಡಿದ್ದೇವೆ—ಆದರೆ ಹೇಗೆ

ಕರೆಯಬೇಕೊ, ಹೇಗೆ ಮಾಡಬೇಕೊ, ಹೇಗೆ ನೋಡಬೇಕೊ ಹಾಗೆ ನೋಡಿಲ್ಲ. ಹಾಗೆ ಮಾಡಿದ್ದರೆ ಭಗವಂತ ನಮಗೆ ಖಂಡಿತ ದೊರಕುತ್ತಿದ್ದ. ಭಯ ನಮ್ಮಿಂದ "ದೂರ" ಓಡುತ್ತಿತ್ತು. ಪುರಂದರದಾಸರ ವಾಣಿಯೊಂದು ಹೀಗೆ ಮೊಳಗುತ್ತಿದೆ:

**ಹೂವ ತರುವರ ಮನೆಗೆ ಹುಲ್ಲು ತರುವ,**
**ಅವ್ವ ಲಕುಮೀರಮಣ ಇವಗಿಲ್ಲ ಗರುವ.... .......**
**ಒಂದು ದಳ ಶ್ರೀತುಳಸಿ ಬಿಂದು ಗಂಗೋದಕವ**
**ಇಂದಿರಾ ರಮಣಗೆ ಅರ್ಪಿತವೆನಲು**
**ಒಂದೇ ಮನಸಿನಲಿ ಸಿಂಧುಶಯನ ಎನೆ**
**ಎಂದೆಂದೂ ವಾಸಿಪನಾ ಮಂದಿರದೊಳಗೆ.**

"ಒಂದೇ" ಮನದಲಿ ಅರ್ಪಿಸಿದರೆ – ಅವನೆಂದೆಂದೂ, ಆ ಮಂದಿರದಲ್ಲಿ ಮಾತ್ರವಲ್ಲ ಅರ್ಪಿಸಿದವರ "ಮನ"ದಲ್ಲೂ ವಾಸಿಸುತ್ತಾನೆ. ಹೀಗೆ "ಒಮ್ಮೆ ಕರೆಯುವ ಬಗೆ" "ಒಂದೇ" ಮನದ್ದಾಗಬೇಕು. ಬೇರೆಯಾಗಿದ್ದ ಮನ "ಒಂದಾ"ದಮೇಲೆ ಇನ್ನೇನಿದೆ!

ಹೀಗೆ "ಒಮ್ಮೆ" ಕರೆದು ಉದ್ಧಾರ ಆದವರು ಯಾರಾದರೂ ಇದ್ದಾರೆಯೇ? ನಮ್ಮ ಉದ್ಧಾರಕ್ಕಾಗಿಯೇ ಉದಾಹರಣೆಗಳು ಚಾಚಿಕೊಂಡಿವೆ. ಅವುಗಳಲ್ಲಿ ಒಂದೆರಡನ್ನು ನೋಡೋಣ.

ಅನೇಕ ಪಾಪಗಳನ್ನು ಮಾಡಿದ್ದ ಅಜಮಿಳ ಕೊನೆಯಲ್ಲಿ "ನಾರಾಯಣ" ಎಂದು ಕರೆದನಂತೆ. ಒಮ್ಮೆ ಕರೆದ ಅಜಾಮಿಳಗೆ ಭಗವಂತ ಮುಕ್ತಿ ನೀಡಿದನಂತೆ. ಇದು ನಾವು ಕೇಳಿರುವ ಕಥೆ. ಇಲ್ಲಿ ನಾವು ಪರಿಭಾವಿಸಬೇಕಾದ ಅಂಶ ಹೀಗಿದೆ: ಅಜಾಮಿಳ ಆ ವೇಳೆಗೆ ತಾನು ಮಾಡಿದ್ದ ಪಾಪಕ್ಕೆ ಪಶ್ಚಾತ್ತಾಪ ಪಟ್ಟು ಪರಿತಪಿಸಿದ್ದ. ಪಶ್ಚಾತ್ತಾಪದ ಬೇಗೆಯಲ್ಲಿ ಅವನ ಪಾಪಗಳೆಲ್ಲವೂ ಬೆಂದುಹೋಗಿದ್ದವು—ನೀರಿನಲ್ಲಿ ಕುದಿದ ಆಲೂಗಡ್ಡೆಯಂತೆ. ಅಲ್ಲಿ ಪಾಪಕ್ಕೆ ಮೊಳೆಯುವ ಶಕ್ತಿ ಇರಲಿಲ್ಲ. ಹೀಗೆ ಪಶ್ಚಾತ್ತಾಪದಿಂದ ಬೆಂದಿದ್ದ ಅಜಾಮಿಳ ಒಂದೇ ಮನದಲಿ "ನಾರಾಯಣ"ನಲ್ಲಿ ಶರಣಾದ. ಅದು ಸಂಪೂರ್ಣ ಶರಣಾಗತಿ ಆಗಿತ್ತು. ಹೀಗೆ ಒಮ್ಮೆ ಕರೆಯುವ ವೇಳೆಗೆ, ಚಿತ್ತ, ಭಾವ, ಶುದ್ಧಿಗೊಂಡು ಭಗವಂತ ನೆಲಸಲು ಹೃದಯದಲ್ಲಿ ಪ್ರೇಮಕಮಲ ಅರಳಿರಬೇಕು. ಈ ರೀತಿ ಪಕ್ವಗೊಂಡವರ ಮನದಲ್ಲಿ ಮಾತ್ರವಲ್ಲ ಮನೆಯಲ್ಲಿ ಆಳಾಗಿ ದುಡಿದಿರುವ ಚಿತ್ರಗಳು ನಮ್ಮ ಮುಂದಿವೆಯಲ್ಲವೇ?

ಶ್ರೀರಾಮಕೃಷ್ಣರ ಗೃಹೀ ಶಿಷ್ಯನಾಗಿದ್ದ ಸುರೇಂದ್ರನಾಥ ಶ್ರೀರಾಮಕೃಷ್ಣರಿಗೆ ಹೀಗೆ ಹೇಳುತ್ತಾನೆ: "ಸರಿಯಾಗಿ ಧ್ಯಾನ ಮಾಡುವುದಕ್ಕೆ ಆಗುತ್ತಿಲ್ಲ. ಆಗಾಗ 'ತಾಯಿ, ತಾಯಿ' ಎಂದಷ್ಟೇ ಹೇಳುತ್ತೇನೆ. ಮಲಗುವ ಸಮಯದಲ್ಲಿ 'ತಾಯಿ, ತಾಯಿ' ಎಂಬುದಾಗಿ ಹೇಳುತ್ತಾ ನಿದ್ರಾವಸ್ಥೆಗೆ ಜಾರಿ ಬೀಳುತ್ತೇನೆ."

ಶ್ರೀರಾಮಕೃಷ್ಣರು: "ಅದೇ ಬೇಕಾದಷ್ಟಾಯಿತು. ಸ್ಮರಣ ಮನನ ಮಾಡಿದಂತಾಯ್ತು."

ಅಂದರೆ ಇದರರ್ಥ ನಾವು ಎಷ್ಟು ಸಾರಿ ಕರೆಯುವೆವು ಎಂಬುದು ಮುಖ್ಯವಲ್ಲ. ಕರೆಯುವ ಬಗೆ ಮುಖ್ಯವಾದುದು. ಅದು "ಒಮ್ಮೆ" ಕರೆಯುವ ಬಗೆ ಒಂದೇ ಆಗಿರಬೇಕು.

**ಭವಘೋರ ಭ್ರಮೆಯಲ್ಲಿ ನಿನ್ನ ನೀನೇ ಮರೆತೆ**
**ಏನೀ ವಿಡಂಬನೆಯು ನಿನಗೆ ತರವೇ?**

ಈ "ಭವ" ಎಂಬುದು ಬಾಂಬೆ ಬಜಾರ್ ಇದ್ದಂತೆ. ಏನು ಆಕರ್ಷಣೆ, ಏನು ಬೆರಗು, ಏನು ಬೆಡಗು, ಏನು ಚಿತ್ತಾರ—ಎಂಥ ವಿಚಿತ್ರ! ಅದರ ಸುಳಿಯಲ್ಲಿ ಸಿಕ್ಕ ಮನಸ್ಸು ಅದರಲ್ಲಿಯೇ ಮುಳುಗಿಹೋಗುತ್ತದೆ —ತೇಲುವುದಿಲ್ಲ. ಭ್ರಮೆಯನ್ನೇ ನಿಜವೆಂದು ಭ್ರಮಿಸುತ್ತದೆ. ಈ ಚಿತ್ತಾರದ ಜಗತ್ತಿನಲ್ಲಿ ತನ್ನನ್ನು ತಾನೇ ಮರೆಯುತ್ತದೆ. ತಾನು ಯಾರು? ತಾನೇಕೆ ಇಲ್ಲಿಗೆ ಬಂದೆ? ತನ್ನ ಗುರಿಯೇನು? ಎಂಬುದನ್ನೇ ಮರೆಯುತ್ತದೆ. ಎಷ್ಟು ಪ್ರಬಲ ಈ ಜಗತ್ತಿನ ಆಕರ್ಷಣೆ? "ನಿನ್ನ ನೀನೇ ಮರೆತೆ". ತನ್ನನ್ನೇ ಮರೆತು ಇದೇ ಬದುಕು ಎಂದು ಕ್ರೀಡಿಸುತ್ತದೆ. ಭಗವಾನ್ ಶ್ರೀರಾಮಕೃಷ್ಣರು ಹೇಳುತ್ತಾರೆ "ಭಗವದ್ ಸಾಕ್ಷಾತ್ಕಾರವೇ ಜೀವನದ ಉದ್ದೇಶ" ಎಂದು. ಆದರೆ ಅದನ್ನು ಮರೆತು ಇಲ್ಲಿಯೇ ತಲ್ಲೀನವಾಗುತ್ತದೆ. ಅದಕ್ಕೆ ಈ ಗೀತೆ ಮುಂದೆ ಹೀಗೆ ಪ್ರಶ್ನಿಸುತ್ತದೆ.

**ಏನೀ ವಿಡಂಬನೆಯು ನಿನಗೆ ತರವೇ?**

"ನಿನಗೆ ತರವೇ?" ಎಂಬ ಶಬ್ದವನ್ನು ಗಮನಿಸಬೇಕು. ಇದು ನಿನಗೆ ತರವೇ? "ಇಲ್ಲಿಗೆ" ಬಂದಿರುವುದು "ಅಲ್ಲಿಗೆ" ಹೋಗುವುದಕ್ಕೆ. ಇಲ್ಲಿರುವುದು "ಸುಮ್ಮನೆ" ಅಲ್ಲಿರುವುದು "ನಮ್ಮ ಮನೆ". ನಿನ್ನ ನಿಜದ ಮನೆಯನ್ನು ಮರೆತು ಭ್ರಮೆಯ ಮನೆಯನ್ನು ನೆಚ್ಚಿ ಕೂರಬಹುದೆ? ಇದು ನಿನಗೆ ತರವೆ? ನಿನ್ನ ಅಂತರಂಗದಲ್ಲಿ ಭಗವದ್ ಅಂಶ ಸುಪ್ತವಾಗಿದೆ. ಅದನ್ನು ವಿಕಾಸಗೊಳಿಸಿ ನಿನ್ನ ನೆಲೆಯನ್ನು ಕಂಡುಕೊಳ್ಳಬೇಕಾಗಿದೆ. ಮಾನವ ಜನ್ಮದ ಉದ್ದೇಶವೇ ಅದು. ನಿನಗೆ ಅದನ್ನು ಅರಿಯುವ ಸಾಮರ್ಥ್ಯವಿದ್ದೂ ಮರೆಯುವುದೇ? "ಏನೀ ವಿಡಂಬನೆಯು" ಎಂದು ಆಶ್ಚರ್ಯ ವ್ಯಕ್ತಪಡಿಸುತ್ತದೆ.

**ಜನಧನದ ಸಂಗದಲಿ ಅವನ ಮರೆಯದ ತೆರದಿ**
**ಎಚ್ಚರಿರು ಭ್ರಮೆಯನ್ನು ಅತ್ತ ದೂಡು**

ಈ ಜಗತ್ತಿಗೆ ಬಂದಮೇಲೆ "ಜನ, ಧನ"ದ ಸಂಗದಲ್ಲಿಯೇ ಬದುಕಬೇಕಾಗುತ್ತದೆ. ಎಲ್ಲವನ್ನೂ ಪರಿತ್ಯಾಗ ಮಾಡಿ ಕಾಡಿನಲ್ಲಿ ಬದುಕುವುದಕ್ಕೆ ಆಗುವುದಿಲ್ಲ ಎಲ್ಲರಿಗೂ. ಹಾಗೆ ಎಲ್ಲವನ್ನೂ "ತ್ಯಜಿಸುವ" ಹಂತವನ್ನು ತಲುಪಿದರೆ ಆ ಮಾತು ಬೇರೆ. ಆದರೆ ಸಾಮಾನ್ಯರಾದ ನಮಗೆ? ಜನ, ಧನ, ಮನೆ, ಮಠ—ಇತ್ಯಾದಿಗಳ ಮಧ್ಯದಲ್ಲಿಯೇ ಬದುಕು. ಆದರೆ "ಎಚ್ಚರಿರು" ಎಂದು ಸೂಚನೆ ನೀಡುತ್ತವೆ ಈ ಸಾಲುಗಳು. ಶ್ರೀರಾಮಕೃಷ್ಣರು ಸಂಸಾರದಲ್ಲಿದ್ದು ಭಗವಂತನನ್ನು ಪಡೆಯುವ ಬಗೆ ಹೇಗೆಂದು ಒಂದು ಸರಳ ಉದಾಹರಣೆ ಮೂಲಕ ವಿವರಿಸುತ್ತಾರೆ. ಬಂಗಾಳದ ಹಳ್ಳಿಗಳಲ್ಲಿ ಕೆಲವು ಕಡೆ ಸ್ತ್ರೀಯರು ಮನೆಯ ಮುಂದೆ ಕುಳಿತು ಭತ್ತ ಕುಟ್ಟುತ್ತ, ಎಲೆ, ಅಡಿಕೆ, ಕಡ್ಲೆಪುಡಿ—ಇತ್ಯಾದಿ ಇತ್ಯಾದಿಗಳನ್ನು ವ್ಯಾಪಾರ ಮಾಡುತ್ತಾರಂತೆ. ಹಾಗೆ ವ್ಯಾಪಾರ ಮಾಡುತ್ತಾ, ಮಗುವಿಗೆ ಹಾಲನ್ನು ಕುಡಿಸುತ್ತಾ, ಸಾಲ ತೆಗೆದುಕೊಂಡವರ ಬಗ್ಗೆ ವಿಚಾರಿಸುತ್ತಾ, ಮೂರು

ಕಾಸಿಗೆ ಎಲೆ, ಆರು ಕಾಸಿಗೆ ಅಡಿಕೆ ಇತ್ಯಾದಿ ಕೊಡುತ್ತಾ, ಒರಳಿಗೆ ಭತ್ತವನ್ನೂ ನೂಕುತ್ತಿರುತ್ತಾರಂತೆ, ಒನಕೆಯ ಏಟು ಕೈಗೆ ಬೀಳದಂತೆ "ಎಚ್ಚರ" ವಹಿಸುತ್ತಾ. ಆ ತರಹದ ಎಚ್ಚರ ಸಂಸಾರದಲ್ಲಿ ಅಗತ್ಯ ಏವೆ. ತನ್ನ ಎಲ್ಲಾ ಕರ್ಮಗಳನ್ನೂ ಮಾಡುತ್ತಾ "ಅವನ ಮರೆಯದ ತೆರದಿ" ಇರಬೇಕು. ನಮ್ಮ ಬದುಕಿನ ಗುರಿಯೇ ಭಗವಂತನನ್ನು ಪಡೆಯುವುದಾಗಿರಬೇಕು.

**ನಿಜವನಾರಾಧಿಸಲು ಸರ್ವಪಾಪ ವಿಮುಕ್ತ**
**ನನ್ನ ಮಾತಿನ ನಿಜವನಳೆದು ನೋಡು.**

ಭಗವಂತನನ್ನು ಆರಾಧಿಸಿದ್ದೇ ಆದರೆ ಅವನನ್ನು ಸೇರುವುದರಲ್ಲಿ ಸಂಶಯವಿಲ್ಲ. ಈ ಮಾತಿನ ಸತ್ಯಾಂಶವನ್ನು ಬೇಕಿದ್ದರೆ ಪರೀಕ್ಷಿಸಿ ನೋಡು ಎಂಬ ಭರವಸೆ ದೊರೆಯುತ್ತದೆ. ಈ ನುಡಿಗಳನ್ನು ಗಮನಿಸಿದಾಗ ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ ಮಾತು ನೆನಪಿಗೆ ಬರುತ್ತದೆ ಅಲ್ಲವೆ? ಅವನು ಹೇಳುವುದಾದರೂ ಏನು? "ನನ್ನ ಭಕ್ತನೆಂದಿಗೂ ನಾಶವಾಗುವುದಿಲ್ಲ" ಎಂದು ತಾನೆ? ಈ ಮೇಲಿನ ನುಡಿಗಳನ್ನು ನಂಬಿ ಮುಂದುವರಿಯೆಂಬ ಒಲವಿನ ಒತ್ತಾಯವಿದೆ. ಭಗವಂತನ ಕಡೆ ನಡೆಯಬೇಕಾದರೆ "ನಂಬಿಕೆ" ಯೇ ಮೂಲಾಧಾರ. "ನಂಬಿ ಕೆಟ್ಟವರಿಲ್ಲವೋ ಶ್ರೀಹರಿಯ" ಎಂಬ ಪುರಂದರದಾಸರ ಮಾತನ್ನು ನೆನಪಿಗೆ ತಂದುಕೊಳ್ಳಬಹುದು. ಮೊದಲು ಭಗವಂತನಲ್ಲಿ "ನಂಬಿಕೆ" ಇಡಬೇಕು. ನಂಬಿಕೆ ದೃಢವಾದರೆ ಭಯವೆಂಬುದು ನಾಶವಾಗುತ್ತದೆ. ಭಯದಿಂದ ಮುಕ್ತನಾದರೆ ಜೀವನ್ಮುಕ್ತನಾಗುತ್ತಾನೆ.

**ಭವಜಲಧಿಯನು ದಾಟ ನಡೆವ ಮನವಿರೆ ನಿನಗೆ**
**ಅಳಿಯಾಸೆಗಳ ತೊರೆದು ಹರಿಯ ನುತಿಸು.**

ಈ ಜಗತ್ತಿಗೆ ಬಂದ ಚರಾಚರ ಜೀವಿಗಳೆಲ್ಲವೂ ಅಂತಿಮವಾಗಿ ಭಗವಂತನನ್ನು ಸೇರಲೇಬೇಕು. ಆ ನಿಟ್ಟಿನಲ್ಲಿಯೆ ಎಲ್ಲ ಜೀವಿಗಳು ಚಲಿಸುತ್ತಿವೆ. ಇಂದಲ್ಲ ನಾಳೆ ಆ ಗುರಿಯನ್ನು ಮುಟ್ಟಲೇಬೇಕು. ಮಾನವ ದೇವಮಾನವನಾಗಲೇಬೇಕು. ಪಾಪಿಗೂ ಉದ್ಧಾರದ ಹಾದಿಯಿದೆ ಈ ಜೀವನ ಯಾತ್ರೆಯಲ್ಲಿ. *A rogue of the first order is a future saint* (ಪುಂಡಾತಿಪುಂಡನೂ ಭವಿಷ್ಯದಲ್ಲಿ ಸಂತನಾಗುತ್ತಾನೆ)—ಎಂದು ಹೇಳುತ್ತಾರೆ ಒಬ್ಬ ಸಂತರು. ಆದರೆ ನಮ್ಮ ಬದುಕನ್ನು ಆಸೆಯೆಂಬ ಕಬಂಧ ಬಾಹುಗಳು ಬಂಧಿಸಿವೆ. ಈ ಆಸೆಗಳನ್ನು ನಾಶಗೊಳಿಸಿದಲ್ಲದೆ ಜೀವಿಯ ಉದ್ಧಾರವಿಲ್ಲ. ಹನ್ನೆರಡು ವರ್ಷಗಳು ನಿರಂತರ ತಪಸ್ಸು ಮಾಡಿ, ಬದ್ಧನಾಗಿದ್ದ ಸಿದ್ಧಾರ್ಥ ಬುದ್ಧನಾಗಿ ಹೊರಬಂದ ತಕ್ಷಣ ಅವನಿಂದ ಹೊರಬಂದ ಮೊದಲ ಉದ್ಗಾರ "ಆಸೆಯೇ ದುಃಖಕ್ಕೆ ಕಾರಣ". ಶ್ರೀಶಾರದಾದೇವಿಯವರು ಹೇಳುತ್ತಾರೆ : "ಮಗು ನಿನ್ನಲ್ಲಿ ಒಂದು ಸಿಹಿತಿಂಡಿ ತಿನ್ನಬೇಕೆಂಬ ಆಸೆಯೊಂದೇ ಉಳಿದಿದ್ದರೂ ಅದಕ್ಕಾಗಿ ಮತ್ತೊಂದು ಜನ್ಮವನ್ನು ಎತ್ತಿಬರಬೇಕಾಗುತ್ತದೆ." ಆದುದರಿಂದ "ಅಳಿಯಾಸೆಗಳ ತೊರೆದು" ಹೊರಬರಬೇಕಾಗುತ್ತದೆ. ಆಸೆಯನ್ನು ತೊರೆದ ಬಳಿಕವೆ ನಿಜಬೆಳಕಿನ ಅರಿವಾಗುತ್ತದೆ. ಕಠೋಪನಿಷತ್ತಿನ ಈ ಮಾತುಗಳನ್ನು ಗಮನಿಸಿ:

**ಯದಾ ಸರ್ವೇ ಪ್ರಮುಚ್ಯಂತೇ**
**ಕಾಮಾ ಯೇಽಸ್ಯ ಹೃದಿ ಶ್ರಿತಾಃ |**
**ಅಥ ಮರ್ತ್ಯೋಽಮೃತೋ ಭವ–**
**ತ್ಯತ್ರ ಬ್ರಹ್ಮ ಸಮಶ್ನುತೇ ||**
**ಯದಾ ಸರ್ವೇ ಪ್ರಭಿದ್ಯಂತೇ ಹೃದಯಸ್ಯೇಹ ಗ್ರಂಥಯಃ |**
**ಅಥ ಮರ್ತ್ಯೋಽಮೃತೋ ಭವತ್ಯೇತಾವದ್ಧ್ಯನುಶಾಸನಮ್ ||**

"ಈತನ ಹೃದಯವನ್ನು ಆಶ್ರಯಿಸಿಕೊಂಡಿರುವ ಕಾಮನೆಗಳೆಲ್ಲ ಯಾವಾಗ ನಾಶವಾಗುವುವೋ ಆಗ ಮರ್ತ್ಯನು ಅಮೃತನಾಗುತ್ತಾನೆ. (ಇಲ್ಲಿಯೇ ಈ ಬದುಕಿನಲ್ಲಿಯೇ) ಬ್ರಹ್ಮವನ್ನು ಹೊಂದುತ್ತಾನೆ. ಇಷ್ಟೇ ಸಮಸ್ತ ವೇದಾಂತದ ಉಪದೇಶ."

ಆದುದರಿಂದ ಭಗವಂತನನ್ನು ನೀನು ಪಡೆಯಲೇಬೇಕೆಂಬ ನಿಜವಾದ ತೀವ್ರವಾದ ಕಳಕಳಿ ನಿನಗಿದ್ದರೆ ಆಸೆಗಳನ್ನು ನಾಶಮಾಡಿ ದೇಹ-ಮನ-ಪ್ರಾಣಗಳನ್ನು ಅವನಿಗೆ ಒಂದೇ ಮನದಲಿ ಸಮರ್ಪಣೆ ಮಾಡಿ ಶರಣಾಗತನಾದರೆ, ಉಪನಿಷತ್ತಿನಲ್ಲಿ ಹೇಳಿರುವ ಮೇಲಿನ ಮಾತಿನಂತೆ, ಇಲ್ಲೇ ಈ ಜನ್ಮದಲ್ಲಿಯೇ ಭಗವಂತನನ್ನು ಪಡೆಯಲು ಸಾಧ್ಯ ಎಂಬ "ಭರವಸೆ"ಯನ್ನು ನೀಡುತ್ತದೆ ಈ ಗೀತೆ. ಈ "ಭರವಸೆ" ಹುಸಿಯಾಗಲು ಸಾಧ್ಯವೇ? ಏಕೆಂದರೆ ಇದು ಭಗವದ್ವಾಣಿ ತಾನೆ!

ಆಧ್ಯಾತ್ಮಿಕ ಹಾದಿ

ಯಾರು ಆಧ್ಯಾತ್ಮಿಕ ಹಾದಿಯಲ್ಲಿ ನಡೆಯಬೇಕೆಂದು ಇಚ್ಛಿಸುವರೋ ಅಂತಹವರು ಆ ಹಾದಿಯಲ್ಲಿ ಒಬ್ಬರೇ ನಡೆಯಲು ನಿಶ್ಚಯಿಸಬೇಕು. ಏಕೆಂದರೆ ಆ ಹಾದಿಯ ಸ್ವಭಾವವೇ ಅದು. ಪ್ರತಿಯೊಬ್ಬರೂ ದೇವರೆಡೆಗೆ ತಮ್ಮದೇ ಆದ ಒಂದು ಹಾದಿಯನ್ನು ಕಂಡುಹಿಡಿಯಬೇಕು. ಯಾರೇ ಇಬ್ಬರು ವ್ಯಕ್ತಿಗಳು ಒಂದೇ ಗತಿಯಲ್ಲಿ ಮುಂದುವರಿಯಲಾರರು. ಏಕೆಂದರೆ ಯಾರೇ ಇಬ್ಬರು ಒಂದೇ ಚೈತನ್ಯದ ಸ್ತರದಲ್ಲಿರುವುದಿಲ್ಲ. ಪ್ರತಿಯೊಬ್ಬರೂ ತಾವೇ ಸಂಪಾದಿಸಬೇಕು. ಪ್ರತಿಯೊಬ್ಬನೂ ತನ್ನ ಯೋಗ್ಯತೆಗೆ, ಸಾಧನೆಗೆ ಭಕ್ತಿಗನುಸಾರವಾಗಿ ದೇವರನ್ನು ಪಡೆಯುತ್ತಾನೆ.

Joel S. Goldsmith.

## ಸೇಂಟ್ ಥೆರೆಸಾ ಮತ್ತು ಪ್ರಾರ್ಥನೆ

ನಿದ್ದೆಯು ಆತ್ಮಕ್ಕೆ ವಿನಃ ದೇಹಕ್ಕಲ್ಲ. ಆದ್ದರಿಂದ ನಿದ್ದೆಗೆ ಹೋಗವ ಮುನ್ನ ಪ್ರಾರ್ಥನೆಯ ಅಭ್ಯಾಸ ಅತ್ಯಗತ್ಯ. ಜೋಕೆ! ಪೂರ್ಣ ಎಚ್ಚರ ಮನಸ್ಸಿನಿಂದ ನಿದ್ದೆಗೆ ಹೋಗಿ, ಆಲಸ್ಯದಿಂದಲ್ಲ. ರಾತ್ರಿಯ ವೇಳೆ ದೇವರಿಗಾಗಿ ಕಾತರಿಸುತ್ತಾ ನಿದ್ದೆಗೆ ಹೋಗಿ.... ಪ್ರಾರ್ಥಿಸುತ್ತಾ ನಿದ್ದೆಗೆ ಹೋಗುವವರು ಹಾಗು ಎಚ್ಚರವಾಗುತ್ತಲೆ ಪ್ರಾರ್ಥನೆ ಮಾಡುವ ಅಭ್ಯಾಸವಿರುವವರು ಭಾಗ್ಯವಂತರು. ಅಂತಹವರು ಮಗುವು ತಾಯಿಯ ಎದೆಹಾಲನ್ನು ಕುಡಿಯುತ್ತಾ ನಿದ್ದೆ ಮಾಡಿ ನಂತರ ಎಚ್ಚರವಾದ ತಕ್ಷಣವೇ ಮತ್ತೆ ಹಾಲನ್ನು ಕುಡಿಯುವಂತೆ ದೇವರ ತೋಳತೆಕ್ಕೆಯಲ್ಲಿ ಆನಂದದಿಂದ ಇರುವರು. ಅವರು ಮಲಗಿದರೂ ಕೂಡ ಎಚ್ಚರವಾದ ಕೂಡಲೆ ತಮ್ಮಾತ್ಮವು ಪ್ರಿಯಕರನ ತೋಳತೆಕ್ಕೆಯಲ್ಲಿ ನಿದ್ರಿಸುತ್ತಿತ್ತು ಎಂಬುದರ ಅರಿವನ್ನು ಉಳಿಸಿಕೊಂಡಿರುತ್ತಾರೆ.